**ಕತೆ**

# ಪುನರಾರಂಭ



## ವಸುಮತಿ ಉಡುಪ

ಕಲೆ: ವೆಂಕಟ್ರಮಣ ಭಟ್

ಅಜ್ಜಿಯ ಮಡಿಲಲ್ಲಿ ಈ ಲೋಕವನ್ನರಿಯದ ಪುಟ್ಟ ಕಂದ ನಿಶ್ಚಿಂತೆಯಿಂದ ಮಲಗಿತ್ತು. ಆಗಷ್ಟೇ ಎರೆದು, ತಲೆ, ಮೈ ವರೆಸಿ, ಕೆನ್ನೆಗೆ ದೃಷ್ಟಿಬೊಟ್ಟು ಇಟ್ಟಿದ್ದ ಮಗು. ಅರ್ಧಂಬರ್ಧ ಸ್ನಾನವಾಗುವಾಗಲೇ ಕಂದನಿಗೆ ನಿದ್ದೆ ತೂಗಿಕೊಂಡು ಬಂದಿತ್ತು. ಮೊಮ್ಮಗನನ್ನು ವಾಡಿಕೆಯಂತೆ ತೊಟ್ಟಿಲಲ್ಲಿ ಮಲಗಿಸಬೇಕಾದ ಸುನಂದಮ್ಮ ಇವತ್ತು ಎತ್ತಿಕೊಂಡು ಕೂತಿರುವುದಕ್ಕೆ ಒಂದು ಸಕಾರಣ ಇತ್ತು. ಸೊಸೆ ಕಾಲೇಜಿಗೆ ಹೊರಟು ನಿಂತಿರುವ ಮೊದಲ ದಿನ. ಅವಳನ್ನು ಕಳಿಸಿಕೊಡಲು ಮುಂಜಗುಲಿಯಲ್ಲಿ ಮಗುವನ್ನೆತ್ತಿಕೊಂಡು ಸ್ಥಾಪನೆಯಾಗಿದ್ದಾರೆ ಅತ್ತೆ. ಒಳಗಿನ ತನ್ನ ಕೋಣೆಯಲ್ಲಿ ಛಾಯಾ ತುಂಬಿ ಬರುವ ಕಣ್ಣೀರನ್ನೊರೆಸಿಕೊಳ್ಳುತ್ತಲೇ ಸೀರೆ ಉಟ್ಟು ಸಿದ್ಧಳಾಗುತ್ತಿದ್ದಾಳೆ. ಮದುವೆಯಾಗುವವರೆಗೆ ಅವಳ ಹತ್ತಿರ ದುಬಾರಿ ಸೀರೆ ಇರಲಿ, ಒಳ್ಳೆಯ ಸೀರೆಗಳೂ ಅಪರೂಪವಾಗಿದ್ದುವು. ಯಾಕೆ ಬೇಕಿತ್ತು ಸೀರೆ? ಮನೆಯಲ್ಲಿದ್ದಾಗಲೆಲ್ಲಾ ನೈಟ್ ಗೌನು. ಅಡುಗೆಮನೆಯ ಕೆಲಸ ಮಾಡುವಾಗ ಒದ್ದೆ ಕೈಗಳನ್ನು ಆಚೀಚೆ ವರೆಸಿ ವರೆಸಿ ರಟ್ಟಿನಂತಾಗಿರುತ್ತಿದ್ದ ಗೌನು ಕೆಲವು ಸಲ ಹೊಲಿಗೆ ಬಿಟ್ಟುಕೊಂಡು ಒಳಗಿನ ಭಾಗಗಳನ್ನು ಪ್ರದರ್ಶಿಸುತ್ತಿದ್ದುದೂ ಇತ್ತು. "ಸೂಜಿ, ದಾರಕ್ಕೆ ಬರಗಾಲ ಬಂದಿದ್ಯಾ? ಹೊಲಿಗೆ ಹಾಕಿಕೊಳ್ಳೋಕೆ ದಾಡಿ ಬಡಿದಿದ್ಯಾ? ಪ್ರತಿಯೊಂದಕ್ಕೂ ಸೋಮಾರಿತನ" ಬೈಯುತ್ತಿದ್ದಳು ಅತ್ತಿಗೆ. ಛಾಯಾ ಈ ಬೈಗುಳವನ್ನು ಈಚೆ ಕಿವಿಯಿಂದ ಕೇಳಿ ಆಚೆ ಕಿವಿಯಿಂದ ಹೊರಗೆ ಬಿಡುತ್ತಿದ್ದುದಕ್ಕೆ ಕಾರಣ ಹೊಸ ಬಟ್ಟೆಯ ಆಸೆ. ಹರಿದಿದ್ದನ್ನು ರಿಪೇರಿ ಮಾಡಿ ಹಾಕಿಕೊಂಡರೆ ಹಾಕಿದ ಬಟ್ಟೆ ವರಸರಿವೆಯಂತಾದರೂ ಅತ್ತಿಗೆಯ ಗಮನಕ್ಕೆ ಬರುವುದಿಲ್ಲ. ಕೆಲವು ಸಲ ಬೇಕೆಂದೇ ಹರಿದ ಜಾಗದಲ್ಲಿ ಬೆರಳು ತೂರಿಸಿ ಮತ್ತಷ್ಟು ಹರಿಯುವಂತೆ ಮಾಡಿ, ಪೇಟೆಗೆ ಹೊರಟ ಅಣ್ಣನಿಗೆ ಅರೆಮನಸ್ಸಿನಿಂದ ತಾಕೀತು ಮಾಡುತ್ತಿದ್ದಳು ಅತ್ತಿಗೆ, "ಎರಡು ನೈಟ್ ಗೌನು ತಗಂಬನ್ನಿ. ಬಂದೋರ ಎದುರೆಲ್ಲಾ ಮರ್ಯಾದೆ ತೆಗಿತ್ತೆ ಇದು. ಯಾರು ಬಂದ್ರೂ ಅವರ ಎದುರು ಹರಿದಿದ್ದನ್ನೇ ಹಾಕಿಕೊಂಡು ಪ್ರದರ್ಶನ ಮಾಡುತ್ತೆ..."

ಈ ಮಾತು ಕಿವಿಗೆ ಬಿದ್ದರೆ ಛಾಯಾಳಿಗೆ ವಿಪರೀತದ ಖುಷಿ. ಅಣ್ಣ ಬರುವ ದಾರಿ ಕಾಯುವ ಉದ್ವೇಗ. ಅಗ್ಗದ ಎರಡು ಬಟ್ಟೆಗೋಸ್ಕರ ಇಷ್ಟೆಲ್ಲಾ ಹಪಾಹಪಿತನ ತೋರಿಸುತ್ತಿದ್ದವಳಿಗೆ ಪ್ರೀತಿಯ ಮಳೆ ಸುರಿಸುವ ಗಂಡ ಸಿಕ್ಕಿದಾಗ ಸ್ವರ್ಗಕ್ಕೆ ಮೂರೇ ಗೇಣು. ಸಕಾರಣವಾಗಿ, ಅಕಾರಣವಾಗಿ ಹೊಸ ಸೀರೆ ತರುತ್ತಿದ್ದ ಗಂಡ. ದುಬಾರಿಯದೇನಲ್ಲ, ಅವರ ಆರ್ಥಿಕ ಮಟ್ಟಕ್ಕೆ ತಕ್ಕಂತೆ ಸಾಧಾರಣದ್ದೇ.

"ನಿಂಗೆ ಲಾಯ್ಕು ಒಪ್ಪುತ್ತೆ ಕಣೇ. ಬಟ್ಟೆ ಅಂಗಡೀಲಿ ನೇತು ಹಾಕಿದ್ದು ನೋಡ್ತಿದ್ದಾಗೆ ನಿನ್ನ ನೆನಪು ಬಂತು..."

"ದುಡ್ಡು ಕುಣಿಯುತ್ತೆ ನಿಮಗೆ" ಅನ್ನುತ್ತಿದ್ದಳು ಛಾಯಾ ಸುಮ್ಮಾನದಿಂದ.

"ಉಟ್ಕಾ ನೋಡಣ, ಹೆಂಗೆ ಕಾಣಿಸ್ತಿ ಅಂತ.."

"ನೀವೊಬ್ರು. ವಾರ ಗೀರ ನೋಡದೆ ತಂದ್ಕೊಡ್ಲೆ